**ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸೇಡಂ.**

ಸಿ.ಸಿ. ನಂಃ 314/2015 ಸಿಡಬ್ಲೂ: 8 ಪಿಡಬ್ಲೂ: 5

ಪ್ರಮಾಣವಚನ ಬೋಧಿಸಲಾಯಿತು ದಿಃ 20-06-2025

ಹೆಸರು : ಶಂಕರ್ ರಾವ್

ತಂದೆ ಹೆಸರು : ಶಿವಾಜಿರಾವ್

ವಯಸ್ಸು : 51 ವರ್ಷ

ಉದ್ಯೋಗ : ಅಭಿಯಂತರರು, ತಾಲೂಕ ಪಂಚಾಯತ್ ಸೇಡಂ

ವಾಸಸ್ಥಳ : ಸೇಡಂ

**:ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ:**

ಚಾ ಸಾ 1 ನನಗೆ ಗೊತ್ತು. ಸನ್ 2005 ರಿಂದ 2013 ರವರೆಗೆ ಸರ್ವ ಶಿಕ್ಷಣ ಅಭಿಯಾನ ರಲ್ಲಿ ಸೇಡಂ ಬ್ಲಾಕ್ ಅಭಿಯಂತರರು ಎಂದು ಸೇವೆಯನ್ನು ಸಲ್ಲಿಸಿರುತ್ತೆನೆ.

ಸೇಡಂ ತಾಲೂಕಿನಲ್ಲಿರುವ ಬಿಲಾಕಲ್ ಗ್ರಾಮದಲ್ಲಿ ಸರ್ಕಾರಿ ಹಿ.ಪ್ರ ಶಾಲೆಗೆ ಸರ್ವ ಶಿಕ್ಷಣ ಅಭಿಯಾನ ಯೋಜನೆ ಅಡಿಯಲ್ಲಿ ಎರಡು ಕೋಣೆ ಹಾಗೂ Duel Dex ಮಂಜೂರಾತಿ ಆಗಿ ಅದಕ್ಕೆ ರೂ.11,00,375/- ಗಳು ಎಸ್ ಡಿ ಎಂ ಸಿ ಅಧ್ಯಕ್ಷ ಹಾಗೂ ಶಾಲೆಯ ಮುಖ್ಯ ಗುರುಗಳು ರವರ ಕೆ ಜಿ ಬಿ ಬ್ಯಾಂಕ್ ರವರ ಜಂಟಿ ಖಾತೆಗೆ ಜಮಾ ಆಗಿದ್ದು ಇರುತ್ತದೆ. ನಾವು ಶಾಲೆಗೆ ಹೋದಾಗ ಪಾಸ್ ಬುಕ್ ನಲಿ ನೋಡಿದೆನು. ತದ ನಂತರ ಎಸ್ ಡಿ ಎಂ ಸಿ ಅಧ್ಯಕ್ಷ ಹಾಗೂ ಶಾಲಾ ಮುಹ್ಯ ಗುರುಗಳು ಅಂದರೆ ಆರೋಪಿತರು ಕಟ್ಟಡ ನಿರ್ಮಿಸಲು ಪ್ರಾರಂಭ ಮಾಡಿರುತ್ತಾರೆ. ನಾವು ಸದರಿ ಕಟ್ಟಡ ಪರಿಶೀಲನೆಗಾಗಿ ಹೋದಾಗ ಅದಕ್ಕೆ ಒಟ್ಟು ರೂ.4,42,124/- ರಷ್ಟು ಖರ್ಚು ಆಗಿರುತ್ತದೆ. ಆರೋಪಿತರು ಒಟ್ಟು ರೂ. 11,00,375/- ಹಣವನ್ನು ತೆಗೆದುಕೊಂಡಿದ್ದು ಆದರೆ ಕಟ್ಟಡ ಪೂರ್ಣಗೊಳಿಸಿಲ್ಲ. ಆದ್ದರಿಂದ ಆರೋಪಿತರು ಸರ್ಕಾರದಿಂದ ಮಂಜೂರಾದ ರೂ.6,07,876/- ಗಳು ದುರುಪಯೋಗ ಪಡಿಸಿಕೊಂಡಿರುತ್ತಾರೆ. ಅದೇ ರೀತಿ ಸರ್ವ ಶಿಕ್ಷಣ ಅಭಿಯಾನ ಮತ್ತು ಸರ್ಕಾದ ಹಣವನ್ನು ದುರುಪಯೋಗ ಮಾಡಿರುತ್ತಾರೆ.

ಸನ್ 2010-11 ಸಾಲಿನ ಎರಡು ಕೋಣೆಗಳ ಕಟ್ಟಡ ಮಾಡಲು ಬೇಕಾದ ಹಣದ ಎಸ್ಟಿಮೇಟ್ ನಾಲ್ಕು ಪಟ್ಟಿಗಳನ್ನು ಸಾಕ್ಷಿಗೆ ತೋರಿಸಲಾಗಿ ಸಾಕ್ಷಿಯು ಅದರಲ್ಲಿರುವ ತನ್ನ ಸಹಿಯನ್ನು ನೋಡಿ

ಗುರುತಿಸಿರುವುದರಿಂದ ಅವುಗಳನ್ನು ಕ್ರಮವಾಗಿ ನಿ ಪಿ 3 ರಿಂದ 6 ಎಂದು ಗುರುತಿಸಲಾಯಿತು. ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ ಪಿ 3(ಎ) ರಿಂದ ನಿ ಪಿ 6(ಎ) ಎಂದು ಗುರುತಿಸಲಾಯಿತು.

**ಪಾಟೀಸವಾಲುಃ** 2 ನೇ ಆರೋಪಿ ಪರ ಶ್ರೀ ಆರ್ ಎಂ ವಕೀಲರಿಂದ:

ಬಿಲಕಲ್ ಗ್ರಾಮದಲ್ಲಿರುವ ಹಿ ಪ್ರ ಶಾಲೆಗೆ ಎರಡು ಕೋಣೆ ನಿರ್ಮಿಸಲು ರೂ.11,00,375/- ಹಣವನ್ನು ಸರ್ಕಾದಿಂದ ಮಂಜೂರಾತಿ ಆದೇಶ ಆಗಿರುತ್ತದೆ. ಸನ್ 2010-11 ಸಾಲಿನಲ್ಲಿ ಸರ್ವ ಶಿಕ್ಷಣ ಅಭಿಯಾನ ಯೋಜನೆ ಅಡಿಯಲ್ಲಿ ಬಿಲಕಲ್ ಗ್ರಾಮಕ್ಕೆ ಹೊರತು ಪಡಿಸಿ ಬೇರೆ ಯಾವುದೇ ಗ್ರಾಮಕ್ಕೆ ನಿರ್ಮಾಣಕ್ಕೆ ಹಣವನ್ನು ಮಂಜೂರಾಗಿಲ್ಲ. ಬಿಲಕಲ್ ಗ್ರಾಮಕ್ಕೆ ರೂ.11,00,375/- ಹಣವನ್ನು ಮಂಜೂರಾತಿ ಆಗಿರುವ ಬಗ್ಗೆ ಆದೇಶ ಪ್ರತಿಯನ್ನು ನೋಡಿದ್ದೀರ ಅಂತಾ ಕೇಳಿದಕ್ಕೆ ಸಾಕ್ಷಿಯು ಶಿಕ್ಷಣಾಧಿಕಾರಿ ನೇರವಾಗಿ ಖಾತೆಗೆ ಜಮಾ ಮಾಡಿರುತ್ತಾರೆ. ಹಾಗೂ ಸದರಿ ಆದೇಶ ನಮಗೆ ಕೊಡುವುದಿಲ್ಲ ಎಂದು ನುಡಿಯುತ್ತಾರೆ. ನಾನು ದಿ.30-01-2013 ರಂದು ಸಂದರ್ಶನ ಮಾಡುವ ಸಮಯದಲ್ಲಿ ರೂ.11,00,375/- ಗಳು ಜಮಾ ಆಗಿರುವ ಬಗ್ಗೆ ನೋಡಿಲ್ಲ ಆದರೆ ಡ್ರಾ ಆಗಿರುವ ಬಗ್ಗೆ ನೋಡಿರುವುದಾಗಿ ನುಡಿಯುತ್ತಾರೆ. ಸದರಿ ಹಣವನ್ನು ಯಾವ ಯಾವ ದಿನಾಂಕದಂದು ಡ್ರಾ ಮಾಡಲಾಗಿದೆ ಎಂದರೆ ಸಾಕ್ಷಿಯು ಆ ಎಲ್ಲಾ ವಿವರಗಳು ನಮಗೆ ಕೊಡುವುದಿಲ್ಲ ಎಂದು ನುಡಿಯುತ್ತಾರೆ.

ನಾನು ಪರಿಶೀಲನೆ ಮಾಡಲು ಹೋದಾಗ ಬೆಸ್ ಮೆಂಟ್ ತನಕ ಕಟ್ಟಡ ಆಗಿತ್ತು. ಸಾಕ್ಷಿಗೆ ನಿ ಪಿ 2 ಭಾವ ಚಿತ್ರವನ್ನು ತೋರಿಸಲಾಗಿ ಅದರಲ್ಲಿ ನಿರ್ಮಾಣವನ್ನು ಚತ್ತಿನ ತನಕ ಕಾಣುತ್ತಿದೆ ಎಂದರೆ ಸರಿ. ಸಾಕ್ಷಿಯು ಮಂದುವರೆದು ನನಗೆ ಸದರಿ ಕೆಲಸದಿಂದ ತೆಗೆದಿರುತ್ತಾರೆ ಹಾಗೂ ಸದರಿ ಕಟ್ಟಡವನ್ನು 8 ದಿನದೊಳಗೆ ಸಹ ಮಾಡಬಹದು ಎಂದು ನುಡಿಯುತ್ತಾರೆ. ನನಗೆ ಸದರಿ ಘಟನೆಯಾದ ಸುಮಾರು 4 ರಿಂದ 5 ದಿನಗಳ ನಂತರ ನನಗೆ ಈ ಕೆಲಸದಿಂದ ತೆಗೆದಿರುತ್ತಾರೆ. ಸದರಿ ಯೋಜನೆ ಮುಕ್ತಾಯ ಗೊಳಿಸಿರುವುದರಿಂದ ತೆಗೆದಿರುತ್ತಾರೆ. ನನಗೆ ದಿನಾಂಕ, ವರ್ಷ ಹೇಳಲು ಬರುವುದಿಲ್ಲ. ಬೆಸ್ ಮೆಂಟ್ ತನಕ ಕಟ್ಟಡ ನಿರ್ಮಿಸಲು ರೂ.4,42,124/- ಗಳು ಖರ್ಚು ಆಗುತ್ತದೆ ಎಂಬುದರ ಕುರಿತು ಪ್ರತ್ಯೇಕವಾಗಿ ಎಸ್ಟಿಮೇಟ್ ಮಾಡಿಲ್ಲ. ಆದರೆ ಪರಸನ್ ಟೇಜ್ ಪ್ರಕಾರ ಡ್ರಾ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಎಸ್ಟಿ ಮೇಟ್ ಪ್ರಕಾರ ಹಣವನ್ನು ಡ್ರಾ ಮಾಡಿರುತ್ತಾರೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಜಾಸ್ತಿ ಡ್ರಾ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಕೆಲಸ ಮಾಡಿದಾಗ ಡ್ರಾ ಮಾಡಿರುವ ಬಗ್ಗೆ ನಾನು ನೋಡಿಲ್ಲ. ಆರೋಪಿತರು ರೂ.6,07,876/- ಹಣವನ್ನು ದುರುಪಯೋಗ ಪಡಿಸಿದ ಬಗ್ಗೆ ನಾನು ಲೆಕ್ಕದ

ಆದಾರದ ಮೇಲೆ ಹೇಳಿದ್ದೇನೆ. ಸದರಿ ಲೆಕ್ಕದ ವಿಚಾರ ನಾನು ಶಿಕ್ಷಣಾಧಿಕಾರಿಗಳಿಗೆ ನೀಡಿದೆನು. ಆರೋಪಿತರು ರೂ.6,07,876/-ಹಣವನ್ನು ದುರುಪಯೋಗ ಪಡಿಸಿದರ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ಅದೇ ರೀತಿ ರೂ.11,00,375/- ಆರೋಪಿತರು ಜಂಟಿ ಖಾತೆಗೆ ಜಮಾ ಆಗಿರುವ ಬಗ್ಗೆ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ಯಾವುದೇ ಮೊತ್ತವನ್ನು ತೆಗೆದುಕೊಳ್ಳಬೇಕಾದರೆ ಶಿಕ್ಷಣಾಧಿಕಾರಿ ಸಾಮಾನ್ಯವಾಗಿ ಸ್ದಳಕ್ಕೆ ಭೇಟಿ ನೀಡುತ್ತಾರೆ ಎಂದರೆ ಸಾಕ್ಷಿಯು ಭೇಟಿ ಮಾಡುತ್ತಾ ಇರುತ್ತಾರೆ ಎಂದು ನುಡಿಯುತ್ತಾರೆ. ಅವರು ಸಹ ಎಲ್ಲಾ ದಾಖಲಾತಿಗಳನ್ನು ಪರಿಶೀಲನೆ ಮಡುತ್ತಾ ಇರುತ್ತಾರೆ  ಎಂದರೆ ಸರಿ. ಚಾ ಸಾ 1 ರವರ ವಿರುದ್ದ ಸರ್ಕಾರದ ಹಣವನ್ನು ದುರುಪಯೋಗ ಪಡಿಸಿರುವುದರಿಂದ ಪ್ರಕರಣ ದಾಖಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ಆರೋಪಿತರು ಯಾವುದೇ ಹಣವನ್ನು ಡ್ರಾ ಮಾಡಿಲ್ಲ ಹಾಗೂ ದುರುಪಯೇಗ ಪಡಿಸಿಕೊಂಡಿಲ್ಲಎಂದರೆ  ಸರಿಯಿಲ್ಲ. ನಾನು ನಮ್ಮ ಮೆಲಧಿಕಾರಿಗಳ ಮಾತನ್ನು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಿಲ್ಲ. ನಿ ಪಿ 3 ರಿಂದ 6 ರಲ್ಲಿ ಬಿಲಕಲ್ ಗ್ರಾಮ ಎಂದು ನಮೂದಿಸಿಲ್ಲ ಸಾಕ್ಷಿಯು ಮುಂದುವರೆದು ಅದು ಸರ್ಕಾರಿಂದ ಪ್ರಿಂಟ್ ಆಗಿ ಬಂದಿದೆ ಎಂದು ನುಡಿಯುತ್ತಾರೆ.ನಿ  ಪಿ 2 ರಿಂದ 6 ರಲ್ಲಿರುವ ಎಸ್ಟಿಮೇಲಟ್ 9ವರ ಬಿಲಕಲ್ ಗ್ರಾಮಕ್ಕೆ ಸಂಬಂದ ಪಟ್ಟಿದ್ದಲ್ಲ ಎಂದರೆ ಸರಿಯಿಲ್ಲ.

ಮರುವಿಚಾರಣೆಃ ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ. ಇದೆ.**

**ಪ್ರ. ದ. ನ್ಯಾ. ದಂ. ಸೇಡಂ.**